

## ‘ಸುಜಾತಾ ಹತ್ತಿರ’

ಗುಂಡನ ಹೆಂಡತಿ ಮನೆಯ ಮುಂದಿನ ಹಗ್ಗದ ಮೇಲೆ ಬಟ್ಟೆ ಹರವುತ್ತಿದ್ದಳು. ಆಗ ಅಲ್ಲಿಗೆ ಬಂದ ಪಕ್ಕದ ಮನೆಯ ಹುಡುಗ, ‘ಆಂಟೀ ಈಗ ಒಂದು ಗಂಟೆಗೆ ಮುಂಚೆ ಅಂಕಲ್ ಸುಜಾತಾ ಹತ್ತಿರ ಮಾತಾಡ್ತಾ ಇರೋದನ್ನ ನಾನು ನೋಡಿದೆ’ ಎಂದು ಹೇಳಿ ಹೊರಟು ಹೋದ. ಅವಳ ಪಿತ್ತ ನೆತ್ತಿಗೇರಿತು. ‘ಅವರು ಮನೆಗೆ ಬರಲಿ ಗ್ರಹಚಾರ ಬಿಡಿಸ್ತೀನಿ’ ಎಂದು ಗಂಡನಿಗೋಸ್ಕರ ಕಾಯುತ್ತ ಕುಳಿತಳು. ಅರ್ಧ ಗಂಟೆಯ ನಂತರ ಗುಂಡ ‘ಉಸ್ಸಪ್ಪ’ ಎನ್ನುತ್ತ ಮನೆಗೆ ಬಂದ. ಹೆಂಡತಿ, ‘ಏನ್ರೀ, ಯಾರ್ರೀ ಅದು ಸುಜಾತಾ! ಅವಳ ಹತ್ರ ಮಾತಾಡ್ತಾ ಇದ್ರಂತೆ! ಪಕ್ಕದ ಮನೆಯ ಹುಡುಗ ಬಂದು ಹೇಳಿದ. ನಿಮಗೇನು ಬಂತು ಈ ವಯಸ್ಸಿನಲ್ಲಿ’ ಎಂದು ರೇಗಿದಳು.

ಅದಕ್ಕೆ ಅವನು, ‘ಸುಜಾತಾ ಮನೆ ಹಾಳಾಗ! ನಿನ್ನ ಅನುಮಾನಕ್ಕಿಷ್ಟು ಬೆಂಕಿ ಹಾಕ, ಸುಜಾತಾ ಥಿಯೇಟರಿನ ಬಳಿ ನನ್ನ ಫ್ರೆಂಡ್ ಜೊತೆ ಮಾತಾಡ್ತಾ ನಿಂತಿದ್ದೆ ಅಷ್ಟೆ’ ಎಂದ.

ಅವಳು ಪಕ್ಕದ ಮನೆಯ ಹುಡುಗನಿಗೆ ಹಿಡಿ ಶಾಪ ಹಾಕುತ್ತ ಕುಳಿತಳು.

**ಎಂ.ಕೆ. ಮಂಜುನಾಥ್, ಬೆಂಗಳೂರು**

## ನಾನೂ ಬರ್ತೀನಿ

ತಿಪ್ಪೇಶಿಯ ಜಗಳ ಹೆಂಡತಿಯೊಡನೆ ದಿನ ದಿನಕ್ಕೆ ತಾರಕಕ್ಕೇರತೊಡಗಿತು. ಮನೆಯೆಂಬುದು ನರಕವಾಯಿತು. ತಾನು ಸನ್ಯಾಸಿಯಾಗುವುದೇ ಸರಿ ಎಂದುಕೊಂಡ ತಿಪ್ಪೇಶಿ ಮನೆ ಬಿಡಲು ನಿರ್ಧರಿಸಿದ. ಒಂದು ದಿನ ‘ನನಗೆ ಈ ಮನೆಯಲ್ಲಿ ಇರೋದು ಇನ್ನು ಸಾಧ್ಯವಿಲ್ಲ. ಮನೆ ಬಿಟ್ಟು ಹೊರಡುತ್ತೇನೆ!’ ಎಂದು ಘೋಷಣೆ ಮಾಡಿದ. ತಕ್ಷಣ ಅವನ ಹೆಂಡತಿ, ‘ಸ್ವಲ್ಪ ತಡೀರಿ ನನಗೂ ಈ ಮನೆಲಿ ಇರೋಕೆ ಆಗುತ್ತಿಲ್ಲ. ಬಟ್ಟೆ ಪ್ಯಾಕ್ ಮಾಡಿಕೊಂಡು ನಿಮ್ಮ ಜೊತೆಗೆ ಬರ್ತೀನಿ’ ಎಂದು ಎದ್ದೇಬಿಟ್ಟಳು!



**ಕೆ.ಜಿ. ಭದ್ರಣ್ಣವರ, ಮುದ್ದೇಬಿಹಾಳ**